**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 688 (653) |
| ಸದಸ್ಯರ ಹೆಸರು: | ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 19.09.2022 |
| ಉತ್ತರಿಸಬೇಕಾದ ಸಚಿವರು: | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆ ಜಾರಿಯಾಗಿ ದಶಕಗಳೇ ಆಗುತ್ತಿದ್ದರೂ ಸಹ ರಾಜ್ಯದ ಎಲ್ಲಾ ಶಾಲೆಗಳಿಗೆ ಕಾಯ್ದೆಯ ಪ್ರಕಾರ ಎಲ್ಲಾ ಮೂಲ ಸೌಲಭ್ಯಗಳನ್ನು ಒದಗಿಸದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br>ಅನುದಾನದ ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ಆರ್.ಟಿ.ಇ. ಕಾಯ್ದೆಯಂತೆ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ಸರ್ಕಾರಿ ಶಾಲೆಗಳಿಗೆ ನೀಡಲಾಗುತ್ತಿದೆ. ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಶಿಕ್ಷಕರು ಗುಣಮಟ್ಟದಿಂದ ತರಗತಿ ಪ್ರಕ್ರಿಯೆಯನ್ನು ನಡೆಸಲು ಅನುವಾಗುವಂತೆ ಶಿಕ್ಷಕರಿಗೆ ವಿವಿಧ ಸ್ವರೂಪದ ತರಬೇತಿಗಳನ್ನು ನೀಡಲಾಗುತ್ತಿದೆ. |
| ಆ) | ಹಾಗಿದ್ದಲ್ಲಿ ಕಳೆದ ಸುಮಾರು 10 ವರ್ಷಗಳಿಂದ ನಾವು ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸಲಾಗಿಲ್ಲದಿರುವುದರಿಂದ ಲಕ್ಷಾಂತರ ಮಕ್ಕಳ ಗುಣಮಟ್ಟದ ಕಲಿಕೆಗೆ ಅಡ್ಡಿಯಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಇ) | ರಾಜ್ಯದ ಎಲ್ಲಾ ಶಾಲೆಗಳಿಗೆ ಕಾಯ್ದೆಯ ಪ್ರಕಾರ ಎಲ್ಲಾ ಮೂಲಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇದಕ್ಕೆ ಯಾವುದಾದರೂ ಕ್ರಿಯಾ ಯೋಜನೆಯನ್ನು ರೂಪಿಸಿದೆಯೇ; (ಇದ್ದಲ್ಲಿ, ಅದರ ಪ್ರತಿ ಒದಗಿಸುವುದು) | ರಾಜ್ಯದಲ್ಲಿ ಕಾಯ್ದೆಯ ಪ್ರಕಾರ ಮೂಲ ಸೌಲಭ್ಯಗಳ ಕೊರತೆ ಇರುವ ಶಾಲೆಗಳ ಮಾಹಿತಿಯನ್ನು ರಾಜ್ಯದ ಎಲ್ಲಾ ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಂದ ಮಾಹಿತಿ ಪಡೆದು ನಿರ್ಮಾಣ ಮತ್ತು ದುರಸ್ಥಿಗೆ ಸಂಬಂಧಿಸಿದಂತೆ ಕ್ರಿಯಾಯೋಜನೆಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆದು ಬಿಡುಗಡೆಯಾದ ಹಣವನ್ನು ಸಂಬಂಧಿಸಿದ ಜಿಲ್ಲೆಗಳಿಗೆ ಈಗಾಗಲೇ ಕಾಮಗಾರಿಗಳ ಅನುಷ್ಠಾನಕ್ಕಾಗಿ ಬಿಡುಗಡೆಗೊಳಿಸಲಾಗಿದೆ 2018-19 ರಿಂದ 2021-22 ರವರೆಗಿನ ಕಾಮಗಾರಿಗಳ ವಿವರವನ್ನು ಅನುಬಂಧದಲ್ಲಿರಿಸಿದೆ. |
| ಈ) | ಯಾವ ಕಾಲಮಿತಿಯೊಳಗೆ ಎಲ್ಲಾ ಶಾಲೆಗಳಿಗೆ ಎಲ್ಲಾ ಮೂಲಸೌಲಭ್ಯವನ್ನು ಒದಗಿಸುವ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ? (ವಿವರ ನೀಡುವುದು) | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಡಿ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅಂದಾಜು ರೂ.5000.00 ಕೋಟಿಗಳ ಅನುದಾನದ ಅವಶ್ಯಕತೆಯಿದ್ದು, ಆಯವ್ಯಯದಲ್ಲಿ ಒದಗಿಸಲಾದ ಅನುದಾನದ ಲಭ್ಯತೆ ಹಾಗೂ ಅಗತ್ಯತೆಗೆ ಅನುಗುಣವಾಗಿ ಹಂತಹಂತವಾಗಿ ರಾಜ್ಯದಾದ್ಯಂತ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅಗತ್ಯ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಇಪಿ 360 ಪಿಜಿಸಿ 2022

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು

ಆಯುಕ್ತರ ಕಛೇರಿ ಸಾರ್ವಜನಿ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ ಬೆಂಗಳೂರು-1

## ಪ್ರಾಥಮಿಕಶಾಲೆ

**ನಿರ್ಮಾಣ**

| ಕ್ರ.ಸಂ | ವರ್ಷ | ಅನುದಾನ(ಲಕ್ಷಗಳಲ್ಲಿ) | ಷರಾ |
|---|---|---|---|
| 1 | 2018-19 | 996.40 | |
| 2 | 2019-20 | 6500.00 | |
| 3 | 2020-21 | - | |
| 4 | 2021-22 | - | |

**ದುರಸ್ತಿ**

| ಕ್ರ.ಸಂ | ವರ್ಷ | ಅನುದಾನ(ಲಕ್ಷಗಳಲ್ಲಿ) | ಷರಾ |
|---|---|---|---|
| 1 | 2018-19 | 2487.65 | |
| 2 | 2019-20 | 2103.00 | |
| 3 | 2020-21 | - | |
| 4 | 2021-22 | 2463.23 | |

## ಪ್ರೌಢಶಾಲೆ

**ನಿರ್ಮಾಣ**

| ಕ್ರ.ಸಂ | ವರ್ಷ | ಅನುದಾನ(ಲಕ್ಷಗಳಲ್ಲಿ) | ಷರಾ |
|---|---|---|---|
| 1 | 2018-19 | 6426.00 | |
| 2 | 2019-20 | 2500.00 | |
| 3 | 2020-21 | 250185.00 | |
| 4 | 2021-22 | - | |

**ದುರಸ್ತಿ**

| ಕ್ರ.ಸಂ | ವರ್ಷ | ಅನುದಾನ(ಲಕ್ಷಗಳಲ್ಲಿ) | ಷರಾ |
|---|---|---|---|
| 1 | 2018-19 | 1989.44 | |
| 2 | 2019-20 | 1578.00 | |
| 3 | 2020-21 | - | |
| 4 | 2021-22 | 467.80 | |